1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಕೂರ್ಮೈಯನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಹಾಲಪ್ಪನವರು, ಮೃತಪಟ್ಟ ಸದರೀ ಕೂರ್ಮೈಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹೊ ಸ ಅಗ್ರಹಾರದ ಸ್ಥಳದ ಸದರೀ ಹಾಲಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕೂರ್ಮೈಯನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಾಲಪ್ಪನವರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೂರ್ಮೈಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜನವರೀ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ-ನಂಜನಗೂಡು ತಾಲ್ಲೂಕು ಯೀಚಿಗಹಳ್ಳೀಯಲ್ಲಿರುವ ಕಿವಾಚಾರದ ಅಜ್ಜೇಗೌಡನ ಮಗ ಪಟೇಲ ಲಿಂಗೇಗೌಡನ ವಿಷಯದಲ್ಲಿ.—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 32.

ಹುಕ್ಕುಂ.

ಮೇಲ್ಕಂಡ ಲಿಂಗೇಗೌಡನೆಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು, ಈ ಕೋರ್ಟು ರೂಬರೂ ಅರ್ಜೀದಾರನಾದ ಲಿಂಗೇಗೌಡನ ಪರವಾಗಿ ಅಡ್ವೊಕೇಟ್ ಮೆ॥ ರಾಘವಾಚಾರ್ರು ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮ್ಮಗೆ ಈ ದರ್ಯಾಫ್ತ್ರೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು; ಯಾರಂದರೆ—1ನೇ ಮಲ್ಲಯ್ಯ, 2ನೇ ನಾರಣಪ್ಪಾ, 3ನೇ ಶಿವಯ್ಯ, 4ನೇ ಚನ್ನಬಸಪ್ಪ, 5ನೇ ನಂಜಪಯ್ಯ, 6ನೇ ವೀರಭದ್ರಯ್ಯ, 7ನೇ ಮರಿಕಾಳಾ, 8ನೇ ನಂಜಪ್ಪ, 9ನೇ ತಿಮ್ಮಯ್ಯಕಟ್ಟೆ ವಬ್ಬ 10ನೇ ವರ್ಧಣಯ್ಯ, 11ನೇ ಅಂಚೆ ದುನಿಯ್ಯ, 12ನೇ ಪ್ಲೀಡರ್ ರಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಟೇಲ ಲಿಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನೀಂದ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜಾಮೀನಗಳು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ನಂಜನಗೂಡು ಪ್ಲೀಡರ್ ರಂಗಂಣ	ನಮೂದಿಲ್ಲ.	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ್ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಾಪಮ್ಮನ ವಿಷಯದಲ್ಲಿ.—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 42.

ಹುಕ್ಕುಂ.

ಮೇಲ್ಕಂಡ ಪಾಪಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರಳಾದ ಪಾಪಮ್ಮನು ಖುದ್ದು ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಕಾಳೇಗೌಡನ ಕಡೆ ಮೆ|| ಯ್ಯರ್. ಸುಬ್ಬರಾಯರು, 2ನೇ ಕಾಳಾಚಾರೀಕಡೆ ಮೆ|| ಅಡ್ವೊಕೇಟ್ ನರಸಿಂಗರಾಯರು, 4ನೇರ ತರಫೆ ನೀಲಕಂಠಮೊದಲಿ, 5ನೇ ಚಂದ್ರಶೇಖರ ಮೊದಲಿ ಇವರಕಡೆ ಮೆ|| ಯ್ಯರ್ ಸುಬ್ಬರಾಯರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ, ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—3ನೇ ಮುತ್ತಸಾಮಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಯಿಟ್ಟಿಗೆ ಗೂಡು ಪಾಪಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯೂಗಿ ಸದರೀ ದಿವಾಳಿಯೂದಳವನ್ನು ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯೂವ ಸಾಲಕ್ಕೋಸ್ಕರವಾಗಿಯೂಗಲಿ ದಸ್ತಗಿರಿ ಮೂಡಲ್ಪಟ್ಟುನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವಳನ್ನು ನಿಖಾಲಸ್ ಮೂಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮೂಡಲ್ಪಟ್ಟಿರುತ್ತೆ.

1886ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹಿಂಬಾಲಿಗನು.	ಯಾವಾಗ ದೇಣೇ ಹುಟ್ಟಿದ್ದು.	ದೇಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ	ಟಿಪ್ಪಣಿ.
1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಾಳೇಗೌಡ.	175–3–10	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ಲಷ್ಕರ್ ಮೊಹಲ್ಲೆಯಲ್ಲಿ ಇರುವ ಗುಲಾಂ ಹುಸೇರ್ಖಾ ಮಗ ಗುಲಾಂ ಮಹಮ್ಮತ್ ಖಾನ ವಿಷಯದಲ್ಲಿ.—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರ್ 224.

ಹುಕ್ಕುಂ.

ಮೇಲ್ಕಂಡ ಗುಲಾಂ ಮಹಮ್ಮತ್‌ಖಾನ್‌ನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಗುಲಾಂ ಮಹಮ್ಮತ್‌ಖಾನ್ ಖುದ್ದು ಹಾಜರ್ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ—1 ನವಾಬ್ ಯಿಬರಾಹಿಂಖಾನ್ ಬಿನ್ತುರಿ, 2ನೇ ಮಹಮ್ಮದ್ ಬಿನ್ತುರಿ ತಂದೆ ಗುಲಾಂಮುಲ್ಕ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುಲಾಂ ಮಹಮ್ಮತ್‌ಖಾನ್‌ನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯೂಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯೂವ ಸಾಲಕ್ಕೋಸ್ಕರವಾಗಿಯೂಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಜನವರೀ 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಂ ಕೊಡಲ್ಪಟ್ಟಿತು.

ಸೂಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಗು.	ಯಾವಾಗ ದೇಣಿ ಕೊಡಬದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿವಿನ್ ಯೀ ನಾದರೂ ಇದ್ದರೆ.	ಷರಾ.
1	ಮೈಸೂರು ಮುಂಡಿಮೊಹಲ್ಲೇಲಿರುವ ಮಹಂಮದ್ ಬೀತುರಿ ತಂದೆ ಗುಲಾಂ ಮುಲ್ಕ್.	135–5–0	..	ಡಿಕ್ರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ಞ್.

ತಾರೀಖು 8ನೇ ಜನವರೀ 1887.

ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ಞ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರೆಜಿಸ್ಟ್ರೇಷ್ಯನ್ ನಂಬರ್.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಸಲ್ಲಿಸಿದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1884—85ನೇ ಇಸವಿ ಬಾಬತು ನಂಬರ್ 336	ಸಂತೆಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರೆಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತೆಬಾಚಹಳ್ಳೀಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣ್ಣಾಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ಳವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತೆಬಾಚಹಳ್ಳಿ ಗ್ರಾಮದಲ್ಲಿ ಪ್ರವತಿಯಾದ ನನ್ನ ಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ-ಪೂರ್ವಕ್ಕೆ ನನ್ನ ಮೈದುನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು-ಪಶ್ಚಿಮ ನನ್ನ ಭಾವ ನಂಜಪ್ಪಯ್ಯ ವುರಫ್ ಅಂಕೈಯನ ಮನೆ ಮತ್ತು ಅವರ ಹಿತ್ತಲು-ವುತ್ತರಕ್ಕೆ ಬಳಿಕ ಜನ್ನ ವೀರಕಪ್ಪ ಹಿತ್ತಲು-ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಕಿಕಸ್ತು ಮೂರು ಅಂಕಣ ಕಟ್ಟು ದಾಯೆ ಇವಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನಮರ, ಇದರಲ್ಲಿ ಇರುವ ತೊಲೆಗಳು ಹಂಚು ಸಹಾ ನಿನಗೆ ಗವರ್ಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.